3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.242/2020**

ಪ್ರಾಸಾ 11

ಚಾಸಾ 21

| | |
|---|---|
| ಹೆಸರು | ರಮೇಶ್ ಡಿ.ಎಸ್ |
| ತಂದೆಯ ಹೆಸರು | ಡಿ.ಎಸ್.ಬಾಷಮ್ |
| ವಯಸ್ಸು | 58 ವರ್ಷ |
| ಉದ್ಯೋಗ | ಸಹಾಯಕ ಕಾರ್ಯಪಾಲಕ ಇಂಜಿನಿಯರ್, RDPR, ಬೆಂಗಳೂರು |
| ವಾಸಸ್ಥಳ | ತುಮಕೂರು |

ಸಾಕ್ಷಿಯನ್ನು ದಿನಾಂಕ 11.06.2026 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ನಾನು 2013 ರಿಂದ 2021 ರವರೆಗೆ ಮಧುಗಿರಿ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2) ದಿಃ17.06.2020 ರಂದು ಮಧುಗಿರಿ ಡಿವೈಎಸ್‌ಪಿರವರ ಕಚೇರಿಯಿಂದ ಕೃತ್ಯ ನಡೆದ ಸ್ಥಳದ ನಕ್ಷೆ ತಯಾರಿಸಿಕೊಡುವಂತೆ ಮನವಿಯನ್ನು ನಮ್ಮ ಕಚೇರಿಯಿಂದ ಸ್ವೀಕರಿಸಿಕೊಂಡಿರುತ್ತಾರೆ. ಈ ಸಂಬಂಧ ನಾನು ದಿಃ02.07.2020 ರಂದು ಬಡವನಹಳ್ಳಿ ಪೋಲೀಸ್ ಠಾಣೆಯ ಪೊಲೀಸ್ ಮುಖ್ಯ ಪೇದೆ ಶ್ರೀರಂಗಯ್ಯರವರು ಎರಡು ಸ್ಥಳಗಳನ್ನು ತೋರಿಸಿದ್ದು ಆ ಸ್ಥಳಗಳ ನಕ್ಷೆಗಳನ್ನು ತಯಾರಿಸಿರುತ್ತೇನೆ. ಸದರಿ ನಕ್ಷೆಗಳನ್ನು ನಿಪಿ.26 ಮತ್ತು 27 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ.26(ಎ) ಮತ್ತು 27(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರಿ.ಆರ್.ಬಿ. (ಸಿಡಿಸಿ) ವಕೀಲರಿಂದಃ**

3) ಲಿಂಗರಾಜುರವರ ಮನೆಯ ಡೋರ್ ನ ಮುಂಭಾಗದಿಂದ ಘಟನಾ ಸ್ದಳಕ್ಕೆ 29 ಮೀಟರ್ ದೂರ ಇರುತ್ತದೆ. 1 ನೇ ಆರೋಪಿಯ ಮನೆಯ ಹಿಂಭಾಗ ಎರಡು ಶೆಡ್ ಗಳು ಇರುತ್ತವೆ. ಮನೆಯ ಡೋರ್ ಮುಂಭಾಗದಲ್ಲಿ ಏನೂ ಇರುವುದಿಲ್ಲ. ನನಗೆ ಪೊಲೀಸರು ಮಹಜರನ್ನು ಕೊಟ್ಟಿದ್ದರು. ನಾನು ಸ್ದಳದಲ್ಲಿ ಕಚ್ಚಾ ನಕ್ಷೆಗಳನ್ನು ತಯಾರಿಸಿಕೊಂಡು ಕಚೇರಿಗೆ ಬಂದು ನಿಪಿ.26 ಮತ್ತು 27 ರಂತೆ ನಕ್ಷೆಗಳನ್ನು ತಯಾರಿಸಿಕೊಂಡಿರುತ್ತೇನೆ. ಕಚ್ಚಾ ನಕ್ಷೆಗಳನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ. ನಾನು ಯಾವುದೇ ಸ್ದಳಕ್ಕೆ ಭೇಟಿ ನೀಡಿರುವುದಿಲ್ಲ, ನಿಪಿ.26 ಮತ್ತು 27 ರಂತೆ ನಕ್ಷೆಗಳನ್ನು ಕಚೇರಿಯಲ್ಲಿ ತಯಾರುಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸದರಿ ನಕ್ಷೆಗಳನ್ನು ತಯಾರಿಸಿ ನೀಡಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ